

ಶಿವರಾಮ ಕಾರಂತರ 'ಬಾಳ್ವೆಯೇ ಬೆಳಕು' ಇರಬಹುದು. ಇವೆಲ್ಲವೂ ಜೀವನದಲ್ಲಿ ಅನೇಕ ಸಂಗತಿಗಳನ್ನು ಒಪ್ಪುವ ಮನಸ್ಥಿತಿಯನ್ನು ರೂಪಿಸಿದಂತೆಯೇ ಬೇರೆ ಕೆಲವನ್ನು ಧಿಕ್ಕರಿಸುವ, ಪ್ರಶ್ನಿಸುವ ಮನಸ್ಥಿತಿಯನ್ನು ನನ್ನೊಳಗೆ ರೂಪಿಸಿದವು. ಜೀವನದ ಬೇರೆ ಬೇರೆ ಹಂತದಲ್ಲಿ ಬರ್ಟ್ರಂಡ್ ರಸೆಲ್, ಟಾಲ್‌ಸ್ಟಾಯ್, ಅಕ್ಕಮಹಾದೇವಿ, ಕುವೆಂಪು, ಬೇಂದ್ರೆ, ಜಿ.ಎಸ್.ಶಿವರುದ್ರಪ್ಪ, ಲಂಕೇಶ್, ದೇವನೂರ ಮಹಾದೇವ ಇವರೆಲ್ಲರ ಬರಹಗಳು ಕೂಡ ನನ್ನ ನೋಡುವ ಕ್ರಮಗಳ ಮೇಲೆ ಪ್ರಭಾವ ಬೀರಿವೆ. ಮೊದಲಿನಿಂದಲೂ ನನಗನ್ನಿಸಿದ್ದೇನೆಂದರೆ, ಹೇಳುವ ಕ್ರಮದಲ್ಲಿ ಆಕ್ರಮಣಶೀಲತೆ ಇರುವುದಕ್ಕೂ, ಪ್ರಾಮಾಣಿಕತೆ ಇರುವುದಕ್ಕೂ ಒಂದು ವ್ಯತ್ಯಾಸ ಇದೆ. ಇದು ಸರಿ, ಇದು ಮಾತ್ರ ಸರಿ, ಇದೇ ಸರಿ ಅನ್ನುವುದಕ್ಕೂ ಇದೂ ಸರಿ ಇರಬಹುದು, ಬೇರೆ ಸಾಧ್ಯತೆಗಳೂ ಇರಬಹುದು ಅನ್ನುವ ನಂಬಿಕೆಯನ್ನು ಹೊಂದಿರುವುದಕ್ಕೂ ವ್ಯತ್ಯಾಸವಿದೆ. ನನ್ನದನ್ನು ಖಚಿತವಾಗಿ ಇಟ್ಟುಕೊಂಡೂ ಅನ್ಯವನ್ನು ಒಳಗೊಳ್ಳುವ ಬಗೆಯನ್ನು ನಾನು ಹುಡುಕುತ್ತಿರುತ್ತೇನೆ. ಆದರೆ ಅನ್ಯದ ಕುರಿತು ತಾತ್ವಿಕ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸದೆ ಇರಲಾರೆ. ಅನ್ಯವನ್ನು ಒಪ್ಪಿಕೊಳ್ಳುವುದು ಅಂತಲ್ಲ, ಅನ್ಯವನ್ನೂ ಗೌರವಿಸುವುದು. 'ಹೇಟ್ ದ ಸಿನ್, ನಾಟ್ ದ ಸಿನ್ನರ್' ಎಂಬ ಮನಸ್ಥಿತಿ ಮೊದಲಿನಿಂದಲೂ ನನ್ನ ಭಾವಕೋಶದಲ್ಲಿದೆ.

ಆಕ್ಟಿವಿಸ್ಟ್‌ಗೆ ಹೆಚ್ಚು ಆಯ್ಕೆಗಳಿರುವುದಿಲ್ಲ. ಆತ ಅಥವಾ ಆಕೆ ತಾನು ನಂಬಿದ ಸಿದ್ಧಾಂತಕ್ಕೆ ಬದ್ಧರಾಗಿಯೇ ಇರುತ್ತಾರೆ.

**ಎಚ್.ಎಸ್. ರಾಘವೇಂದ್ರ ರಾವ್** (1948) ಕನ್ನಡದ ಪ್ರಮುಖ ವಿಮರ್ಶಕ ಮತ್ತು ಅನುವಾದಕರು. ಬೆಂಗಳೂರಿನ ನ್ಯಾಷನಲ್ ಕಾಲೇಜು ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಣೆ. 'ಕ್ರೈಸ್ಟ್ ಕಾಲೇಜು' ಕನ್ನಡ ಸಂಘದಲ್ಲಿ ಚಿ. ಶ್ರೀನಿವಾಸರಾಜು ಅವರ ಜೊತೆಗಿದ್ದು ಕನ್ನಡದ ಅನೇಕ ಮುಖ್ಯ ಪ್ರಕಟಣೆಗಳಿಗೆ ಬೆಂಬಲವಾಗಿ ನಿಂತವರು. ನೂರಾರು ಲೇಖಕರಿಗೆ ಮಾರ್ಗದರ್ಶನ. ಕರ್ನಾಟಕದ ಸಾಹಿತ್ಯ–ಸಂಸ್ಕೃತಿಯ ಚಿಂತನೆ ಚರ್ಚೆಗಳಲ್ಲಿ ನಾಲ್ಕೈದು ದಶಕಗಳಿಂದ ಭಾಗಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಹಂಪಿ ವಿಶ್ವವಿದ್ಯಾಲಯದ ಹಲವು ಮಹತ್ವದ ಯೋಜನೆಗಳ ಸಂಯೋಜಕ ಮತ್ತು ಸಂಪಾದಕ. 'ವಿಶ್ಲೇಷಣೆ', 'ನಿಲುವು', 'ಪ್ರಗತಿಶೀಲತೆ', 'ಹಾಡೆ ಹಾದಿಯ ತೋರಿತು', 'ತರುತಳೆದ ಪುಷ್ಪ', 'ನಮಸ್ಕಾರ', 'ಸಂಗಡ', 'ಚಕ್ರವರ್ತಿಯ ಬಟ್ಟೆಗಳು', 'ಕಣ್ಣ ಹನಿಗಳ ಕಾಣಿಕೆ', 'ನೀರಿಗೆ ಮೂಡಿದ ಆಕಾರ' ಮತ್ತು 'ನಿಜವು ತೋರದಲ್ಲ' ಪ್ರಮುಖ ವಿಮರ್ಶಾ ಸಂಕಲನಗಳು. 'ಇರುವೆಗಳು ಮತ್ತು ಇತರ ಕತೆಗಳು', 'ಮಂಜಿನ ಶಿವಾಲಯಕ್ಕೆ', 'ಮಂಜು ಮಣ್ಣು ಮೌನ', 'ಕಪ್ಪು ಕವಿತೆ', 'ಹತ್ತು ದಿಕ್ಕಿನ ಬೆಳಕು' ಮತ್ತು 'ಪ್ಲೇಗ್' ಕೆಲವು ಅನುವಾದ ಕೃತಿಗಳು. 'ಶತಮಾನದ ಸಾಹಿತ್ಯ ವಿಮರ್ಶೆ' ಕನ್ನಡದ ವಿಮರ್ಶಾ ಲೇಖನಗಳ ಅಪರೂಪದ ಸಂಪಾದನೆ. 'ಜನ ಗಣ ಮನ' ಚರ್ಚಿತ ಪ್ರವಾಸ ಕಥನ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ, ಎಲ್. ಬಸವರಾಜು ಪ್ರಶಸ್ತಿ, ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿಗಳನ್ನು ಪಡೆದಿರುವರು. ಪ್ರಸ್ತುತ, ಪತ್ನಿ ನಿರುಪಮಾ ಜೊತೆ ಬೆಂಗಳೂರಿನಲ್ಲಿ ವಾಸ.